ಓ. ಎಸ್. ಸಂಖ್ಯೆ ಃ 71–2019
ಡಿ . ಡಬ್ಲ್ಯೂ. ಃ 2

ಸಾಕ್ಷಿಯನ್ನು ದಿನಾಂಕ : 25–10–2022 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಪರ ಶ್ರೀ ಎ ಬಿ ವಕೀಲರಿಂದ

1. ಕಲೀಮುದ್ದಿರವರು ಖರೀದಿ ಮಾಡಿದಕಿಂತ ಮೊದಲಿನಿಂದಲು ಅವರ ಪರಿಚಯವಿದೆ. ನಾನು 10 ನೇ ತರಗತಿ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲಾ ಅಂದರೆ ಸರಿಯಲ್ಲ. ಮೊಹ್ಮದ ಜೈನೋದ್ದಿನರವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಮೊಹ್ಮದ ಜೈನೋದ್ದಿನರವರು ತೀರಿಕೊಂಡಿರುತ್ತಾರೆ. ನಿಡವಂಚಾ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟ ಹೆಣ್ಣು ಮಗಳು ತೀರಿಕೊಂಡಿರುತ್ತಾರೆ. ಮೊಹ್ಮದ ಜೈನೋದ್ದಿನರವರ ಜಮೀನಿನಲ್ಲಿ, ಜೈನೋದ್ದಿನ ಮತ್ತು ಅವರ ಮಕ್ಕಳು ವೈವಸಾಯ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಮೊಹ್ಮದ ಜೈನೋದ್ದಿನರವರು ಅವರೆ ಅವರ ಮಕ್ಕಳೆ ಮಾಡಿರುತ್ತಾರೆ ಅಂದರೆ ಸಾಕ್ಷಿಯು 1 ನೇ ಪ್ರತಿವಾದಿ ಮದುವೆ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುರುತ್ತಾರೆ. ಮೊಹ್ಮದ ಜೈನೋದ್ದಿನರವರ ಸರ್ವೆ ನಂ 42 ಇದೆ. ಮೊಹ್ಮದ ಜೈನೋದ್ದಿನರವರ ತೀರಿಕೊಂಡ ನಂತರ ಸದರಿ ಜಮೀನು 1 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಮೊಹ್ಮದ ಜೈನೋದ್ದಿನರವರ ಮಕ್ಕಳು ಚಿಕ್ಕವರಿದ್ದಾಗ ಮೊಹ್ಮದ ಜೈನೋದ್ದಿನ ಸದರಿ ಜಮೀನು ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ.

2. ವಾದಿಯನ್ನು ನನಗೆ ಗುರುತಿಸಲು ಆಗುವುದಿಲ್ಲಾ. ವಾದಿ ಬೇರೆ ಊರಿನವರು ಆಗಿರುತ್ತಾರೆ. ಮೊಹ್ಮದ ಜೈನೋದ್ದಿನ ಮತ್ತು ಅವರ ಮಕ್ಕಳು ದಾವಾ ಜಮೀನಿನಲ್ಲಿ ಒಟ್ಟಾಗಿ ವೈವಸಾಯ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಮೊಹ್ಮದ ಜೈನೋದ್ದಿನ ದಾವಾ ಜಮೀನಿನಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ಭಾಗ ಕೊಡುತ್ತೇನೆ ಅಂತಾ ಹೇಳಿದ್ದರು ಅಂದರೆ ಸರಿಯಲ್ಲ. ಸುಮಾರು 40 ವರ್ಷಗಳ ಹಿಂದೆ 1 ನೇ ಪ್ರತಿವಾದಿ ವ್ಯಾಪಾರ ಮಾಡುತ್ತಿದ್ದನು. ತಿಂಗಳಿಗೆ 4–5 ಸಾವಿರ

ಆದಾಯ ಬರುತ್ತಿತ್ತು. ನನಗೆ ಕೇಳಿ 1 ನೇ ಪ್ರತಿವಾದಿ ದಾವಾ ಅಸ್ತಿ ಖರೀದಿ ಮಾಡಿರುತ್ತಾರೆ. ಖರೀದಿ ಪತ್ರ ಆಗುವ ಸಮಯದಲ್ಲಿ ನಾನು ಇರಲಿಲ್ಲಾ. ಸದರಿ ಜಮೀನು ಖರೀದಿ ಮಾಡುವಾಗ 1 ನೇ ಪ್ರತಿವಾದಿ ಶಾಲೆ ಕಲಿಯುತ್ತಿದ್ದ ಅಂದರೆ ಸರಿಯಲ್ಲ. ಇವತ್ತು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ನನಗೆ ಕರೆದುಕೊಂಡು ಬಂದಿದ್ದಾನೆ. 1 ನೇ ಪ್ರತಿವಾದಿ 10 ನೇ ತರಗತಿ ಓದಿರುತ್ತಾನೆ. ಮಕ್ಕಳು ತಂದೆ ಹೆಸರಿನಲ್ಲಿ ಜಮೀನು ಖರೀದಿ ಮಾಡುವುದಿಲ್ಲಾ ಅಂದರೆ ಸರಿಯಲ್ಲ. ವಾದಿಯರಿಗೆ ದಾವಾ ಅಸ್ತಿಯಲ್ಲಿ ಭಾಗ ಕೊಡಬಾರದು ಎಂಬ ಉದ್ದೇಶದಿಂದ 1 ನೇ ಪ್ರತಿವಾದಿ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಾವೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಪ್ರ.ಹಿ ಸಿವಿಲ್ ಜಡ್ಜ & ಸಿ. ಜೆ.ಎಮ್
ನ್ಯಾಯಾಧೀಶರು, ಬೀದರ್.